# ಶ್ರೀ ಸುಬ್ರಹ್ಮಣ್ಯ ಪಂಚರತ್ನಮ್

**ಷಡಾನನಂ ಚಂದನಲೇಪಿತಾಂಗಂ**
**ಮಹಾಮತಿಂ ದಿವ್ಯಮಯೂರವಾಹನಮ್ ।**
**ರುದ್ರಸ್ಯ ಸೂನುಂ ಸುರಲೋಕನಾಥಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೧ ॥**

ಆರು ಮುಖಗಳುಳ್ಳ, ಶ್ರೀಗಂಧವನ್ನು ಲೇಪಿಸಿದ ಅಂಗಗಳಿಂದ ಶೋಭಿಸುವ, ಮಹಾ ಬುದ್ಧಿಶಾಲಿಯಾದ, ದಿವ್ಯ ನವಿಲಿನ ವಾಹನದಿಂದ ಕೂಡಿದ, ಶಿವನ ಮಗನಾದ, ಸ್ವರ್ಗದ ನಾಥನಾದ, ಬ್ರಹ್ಮಣ್ಯದೇವನಾದ ಕಾರ್ತಿಕೇಯನಲ್ಲಿ ಶರಣಾಗುವೆನು.

**ಜಾಜ್ವಲ್ಯಮಾನಂ ಸುರವೃಂದವಂದ್ಯಂ**
**ಕುಮಾರಧಾರಾತಟಮಂದಿರಸ್ಥಮ್ ।**
**ಕಂದರ್ಪರೂಪಂ ಕಮನೀಯಗಾತ್ರಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೨ ॥**

ದೇವತೆಗಳಿಂದ ವಂದಿಸಲ್ಪಡುವ, ಬೆಳಗುತ್ತಿರುವ, ಕುಮಾರಧಾರಾ ನದಿಯ ತಟದಲ್ಲಿರುವ ಮಂದಿರದಲ್ಲಿ ವಾಸಿಸುತ್ತಿರುವ, ಮನ್ಮಥನಂತೆ ಸುಂದರ ದೇಹದಿಂದ ಕಂಗೊಳಿಸುತ್ತಿರುವ ಬ್ರಹ್ಮಣ್ಯದೇವನಾದ ಕಾರ್ತಿಕೇಯನಲ್ಲಿ ಶರಣಾಗುವೆನು.

**ದ್ವಿಷಡ್ಭುಜಂ ದ್ವಾದಶದಿವ್ಯನೇತ್ರಂ**
**ತ್ರಯೀತನುಂ ಶೂಲಮಸಿಂ ದಧಾನಮ್ ।**
**ಶೇಷಾವತಾರಂ ಕಮನೀಯರೂಪಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೩ ॥**

ಹನ್ನೆರಡು ಭುಜ ಹಾಗೂ ಕಣ್ಣುಗಳುಳ್ಳ, ಮೂರು ವೇದಗಳನ್ನು ತನ್ನ ದೇಹವಾಗಿ ಹೊಂದಿರುವ, ಶೂಲ-ಖಡ್ಗಗಳನ್ನು ಧರಿಸಿರುವ, ಆದಿಶೇಷನ ಅವತಾರವಾದ, ಸುಂದರ ರೂಪದಿಂದ ಕೂಡಿದ, ಬ್ರಹ್ಮಣ್ಯ ದೇವನಾದ ಕಾರ್ತಿಕೇಯನಲ್ಲಿ ಶರಣಾಗುವೆನು.

**ಸುರಾರಿಘೋರಾಹವಶೋಭಮಾನಂ**
**ಸುರೋತ್ತಮಂ ಶಕ್ತಿಧರಂ ಕುಮಾರಮ್ ।**
**ಸುಧಾರಶಕ್ತ್ಯಾಯುಧಶೋಭಿಹಸ್ತಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೪ ॥**



ಅಸುರರೊಡನೆ ನಡೆದ ಯುದ್ಧದಲ್ಲಿ ಶೋಭಾಯಮಾನನಾದ, ದೇವಶ್ರೇಷ್ಠನಾದ, ಶಕ್ತಿಸಂಪನ್ನನಾದ, ಕುಮಾರನಾಗಿರುವ, ಕೈಯಲ್ಲಿ ಶಕ್ತ್ಯಾಯುಧವನ್ನು ಧರಿಸಿ ಶೋಭಿಸುತ್ತಿರುವ ಬ್ರಹ್ಮಣ್ಯ ದೇವನಾದ ಕಾರ್ತಿಕೇಯನಲ್ಲಿ ಶರಣಾಗುವೆನು.

**ಇಷ್ಟಾರ್ಥಸಿದ್ಧಿಪ್ರದಮೀಶಪುತ್ರಂ**
**ಮಿಷ್ಟಾನ್ನದಂ ಭೂಸುರಕಾಮಧೇನುಮ್ ।**
**ಗಂಗೋದ್ಭವಂ ಸರ್ವಜನಾನುಕೂಲಂ**
**ಬ್ರಹ್ಮಣ್ಯದೇವಂ ಶರಣಂ ಪ್ರಪದ್ಯೇ ॥ ೫ ॥**

ಇಷ್ಟಾರ್ಥಗಳನ್ನು ಪೂರ್ಣಗೊಳಿಸುವ, ಈಶನ ಪುತ್ರನಾದ, ಸಿಹಿತಿಂಡಿ ಮುಂತಾದುವನ್ನು ದಯಪಾಲಿಸುವ, ಬ್ರಾಹ್ಮಣರಿಗೆ ಕಾಮಧೇನುವಿನಂತಿರುವ, ಗಂಗಾನದಿಯ ತೀರದಲ್ಲಿ ಜನಿಸಿರುವ, ಎಲ್ಲ ಜನರಿಗೂ ಕೃಪೆದೋರುವ ಬ್ರಹ್ಮಣ್ಯ ದೇವನಾದ ಕಾರ್ತಿಕೇಯನಲ್ಲಿ ಶರಣಾಗುವೆನು.

## ಸೂಕ್ತಿಪ್ರಭ

ಭಗವಂತನಲ್ಲಿ ಶರಣಾದವನ ಹಣೆಯ ಬರಹ ಅಳಿಸಿ ಹೋಗುವುದು. ಅಂಥವನ ಹಣೆಬರಹವನ್ನು ಬರೆದ ವಿಧಿಯೇ ಅದನ್ನು ಅಳಿಸಿಹಾಕುವುದು.

— ಶ್ರೀಮಾತೆ ಶಾರದಾದೇವಿ

ಧರ್ಮ ಮತ್ತು ಪ್ರಾಯೋಗಿಕ ಜೀವನ ಬೇರಲ್ಲ. ಸಂನ್ಯಾಸ ಎಂದರೆ ಜೀವನದಿಂದ ಓಡಿ ಹೋಗುವುದಲ್ಲ. ಒಬ್ಬನೇ ದುಡಿಯುವ ಬದಲು ದೇಶ, ಕುಟುಂಬ, ಕೆಲಸ ಎಲ್ಲವನ್ನೂ ಒಂದಾಗಿಸಿ ದುಡಿಯುವುದೇ ನಿಜವಾದ ಆದರ್ಶ. ಅದರಾಚೆಗೆ ಇಡೀ ಮನುಕುಲದ ಸೇವೆ, ಇನ್ನೂ ಮುಂದಕ್ಕೆ ಭಗವಂತನ ಸೇವೆ.

—ಬಾಲಗಂಗಾಧರ ತಿಲಕ್

ನೋವಿನಲ್ಲಿರುವ ಸುಖವು, ಸುಖದಲ್ಲೇ ಇರುವ ಸುಖಕ್ಕಿಂತ ಹೆಚ್ಚು ಮಧುರವಾಗಿರುತ್ತದೆ. —ಪಿ.ಬಿ. ಶೆಲ್ಲಿ

ಅಜ್ಞಾನವಲ್ಲ; ಅಜ್ಞಾನದ ಅಜ್ಞಾನವೇ ಜ್ಞಾನಕ್ಕೆ ಮೃತ್ಯುವಾಗಿರುತ್ತದೆ. — ಅಲ್ಫ್ರೆಡ್ ನಾರ್ತ್ ವೈಟ್‌ಹೆಡ್